**ಇಂದು ದಿನಾಂಕ:15.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಸಿ.ಜಿ.ವಕೀಲರಿಂದಃ**

RA No.87/2017 ರಲ್ಲಿ ಪ್ರಸನ್ನ ಎಂಬ ವಕೀಲರನ್ನು ನೇಮಿಸಿಕೊಂಡಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಪರವಾಗಿ ವಕೀಲರು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಾನು ಕೂಡ ಆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಲವಾರು ಬಾರಿ ಹೋಗಿದ್ದೆ ಎಂದರೆ ಸರಿ. RA No. 87/2017 ರಲ್ಲಿ ಒಂದು ಆದೇಶವಾಗಿದ್ದು ಅದರ ಪ್ರಕಾರ ನನ್ನ ಹೆಸರಿಗೆ ಆಗಿರುವ ದಾವಾ ಆಸ್ತಿಯ ಖಾತೆಯನ್ನು ರದ್ದುಗೊಳಿಸಿ ವಾದಿಯ ಹೆಸರಿಗೆ ಇಡಬೇಕೆಂದು ಆದೇಶಿಸಿದ್ದಾರೆ ಎಂದರೆ ಗೊತ್ತಿಲ್ಲ. 2017 ರಿಂದಲೂ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಅಸಲು ದಾವಾ ನಂಬರ್ 246/2023 RA No. 48/2013 ರಲ್ಲಿ ವಾದಿಗೆ ತಿಳಿಯದಂತೆ ನಾನು ಡಿಕ್ರಿ ಪಡೆದುಕೊಂಡಿದ್ದು ಆ ಸಂಬಂಧ ವಾದಿ ನ್ಯಾಯಾಲಯದಲ್ಲಿ ಕ್ರಿಮಿನಲ್ ದೂರು ದಾಖಲಿಸಿದ್ದ ಮೇರೆಗೆ ನನ್ನ ವಿರುದ್ಧ ಸಿ.ಆರ್ 293/2017 ರಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸುಳ್ಳು. ನನ್ನ ಮಗ ಪೊಲೀಸ್ ಆಗಿರುವುದರಿಂದ ಪೊಲೀಸರೊಡನೆ ಶಾಮೀಲಾಗಿ ಆ ಪ್ರಕರಣವನ್ನು ಮುಚ್ಚಿ ಹಾಕಿದ್ದೇನೆ ಎಂದರೆ ಸುಳ್ಳು. ವಾದಿ ಸಹಿ ಮಾಡುತ್ತಾರೋ ಅಥವಾ ಹೆಬ್ಬೆರಳು ಗುರುತು ಹಾಕುತ್ತಾರೋ ಗೊತ್ತಿಲ್ಲ. ವಾದಿ ಮಾಗಲಿ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು ಅವರು ಬಂಡಳ್ಳಿಯಲ್ಲಿದ್ದಾರೆ. ಅವರು ಅಲ್ಲಿ ವಾಸವಿದ್ದಾರೆ ಎಂದು ತೋರಿಸುವ ದಾಖಲೆ ನನ್ನ ಬಳಿ ಇಲ್ಲ. ವಾದಿ ಕಾಳಮರಿಗೌಡ ಎಂದು ತೋರಿಸುವ ಸರ್ಕಾರಿ ದಾಖಲೆ ನನ್ನ ಬಳಿ ಇರುವುದಿಲ್ಲ. ನಾನು ಕರಿಯಪ್ಪ ಅಲಿಯಾಸ್ ಕರೀಗೌಡ ಮಗ ಹೆಚ್.ಕೆ.ಮಲ್ಲೇಶ ಎಂದು ತೋರಿಸಲು ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇದೆ. ನನ್ನ ಆಧಾರ್ ಕಾರ್ಡ್, ರೇಷನ್ ಕಾರ್ಡ್ ನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಲು ತೊಂದರೆ ಇಲ್ಲ. ವಾದಿಗೆ ನಾನು ಯಾವ ವರ್ಷದಲ್ಲಿ ಆನ್ ಡಿಮ್ಯಾಂಡ್ ಪ್ರೊನೋಟ್ ಬರೆದುಕೊಟ್ಟಿದ್ದೇನೆ ಎಂದು ನೆನಪಿಲ್ಲ. ನಿ.ಡಿ–1ರ ದಾಖಲೆಯನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿದ್ದೇನೆ ಎಂದು ಗೊತ್ತಿಲ್ಲ. ನಿ.ಡಿ–1 ರ ದಾಖಲೆಯನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದಿದ್ದರೂ ನಿ.ಡಿ–1 ಮತ್ತು 2ರ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ–2 ರ ಒಕ್ಕಣೆಗಳನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಿ.ಡಿ–2 ರ ದಾಖಲೆಯಲ್ಲಿರುವ ಹೆಬ್ಬೆರಳು ಗುರುತಿನ ಪಕ್ಕದಲ್ಲಿ "ಕಾಳಮರೀಗೌಡರ ಹೆಬ್ಬೆರಳು ಗುರುತಿಗೆ" ಎಂಬುದನ್ನು ಪತ್ರ ಬರಹಗಾರರು ಬರೆದಿದ್ದಾರೆ. ನನ್ನ ಹೆಸರಿನಲ್ಲಿ ಬರುವ ಹೆಚ್ ಮತ್ತು ಕೆ ಎಂದರೆ ಏನು ಎಂದರೆ ನಾನು ತಿಳಿದುಕೊಂಡಿಲ್ಲ. ನಾನು ಅಣ್ಣೇಗೌಡರ ಮಗ ರಾಜು ಮತ್ತು ಸಣ್ಣಹುಚ್ಚೇಗೌಡರ ಮಗ ಸೋಮಶೇಖರ ವಿಶ್ವಾಸದಿಂದ ಇದ್ದೇವೆ ಎಂದರೆ ಸಹಜವಾಗಿ ಮಾತುಕತೆ ಆಡುತ್ತೇವೆ. 2002 ಕ್ಕಿಂತ ಹಿಂದೆ ನನ್ನ ತಂದೆಯನ್ನು ಹೆಚ್ ಎಂ.ಕರಿಯಪ್ಪ ಅಲಿಯಾಸ್ ಕರೀಗೌಡ ಎಂದು ತೋರಿಸುವ ದಾಖಲೆ ಯಾವುದಾದರೂ ಇದೆಯೇ ಎಂದರೆ ಕ್ರಯ ಪತ್ರ ಇದೆ. 2002 ನೇ ಇಸವಿಯಿಂದಿಚೆಗೆ ವಾದಿ ಮತ್ತು ಮಾಗಲಿ ಗ್ರಾಮದ ಕರೀಗೌಡ ಬಿನ್ ಮಲ್ಲೇಗೌಡರವರ ಆಸ್ತಿಗಳನ್ನು ಕಬಳಿಸಲು ಅಸಲು ದಾವಾ ನಂಬರ್ 246/2008 ಹಾಗೂ ಆರ್.ಎ.ನಂಬರ್ 48/2013 ರಲ್ಲಿ ನನ್ನ ಹೆಸರನ್ನು ಹೆಚ್ ಎಂ.ಕರಿಯಪ್ಪ ಅಲಿಯಾಸ್ ಕರೀಗೌಡ ಎಂಬುದಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ನನ್ನ ಸಹೋದರರು ಮತ್ತು ನನ್ನ ತಾಯಿಯವರ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಗಳಲ್ಲಿ ನನ್ನ ತಂದೆಯ ಹೆಸರು ಹೆಚ್ ಎಂ.ಕರಿಯಪ್ಪ ಅಲಿಯಾಸ್ ಕರೀಗೌಡ ಎಲ್ಲಿಯೂ ಬರೆದಿದೆ ಎಂದರೆ ಸರಿಯಲ್ಲ. ದಿನಾಂಕ

18.02.2002 ನೇ ಇಸವಿಯ ಸಮ್ಮತಿ ಪತ್ರದ ಪ್ರಕಾರ ವಾದಿ ಕಾಳಮರೀಗೌಡರಿಗೆ ಸಾಗುವಳಿ ಸಿಕ್ಕಿತು. 2002-03 ರಲ್ಲಿ ದಾವಾ ಆಸ್ತಿಯ ಖಾತೆ ನನ್ನ ಹೆಸರಿಗೆ ಆಗಿದೆ. ದಿನಾಂಕ 18.02.2002 ರ ಒಪ್ಪಿಗೆ ಸಮ್ಮತಿ ಪತ್ರದ ದಿನಾಂಕದಂದು ವಾದಿಯ ಹೆಸರಿಗೆ ಖಾತೆ ಇತ್ತು ಸಾಕ್ಷಿಯು ಸ್ವತಃ ಹೇಳುವುದೆಂದರೆ ಆ ನಂತರ ನಮ್ಮ ಹೆಸರಿಗೆ ಬರೆದುಕೊಟ್ಟರು. ದಿನಾಂಕ 18.02.2002 ರ ಒಪ್ಪಿಗೆ ಸಮ್ಮತಿ ಪತ್ರಕ್ಕೆ ವಾದಿ ಸಹಿ ಮಾಡಿಲ್ಲ. ದಿನಾಂಕ 18.02.2002 ರ ಒಪ್ಪಿಗೆ ಸಮ್ಮತಿ ಪತ್ರದಲ್ಲಿ ಕಾಣಿಸಿರುವ ಆಸ್ತಿಗಳ ಖಾತೆ ನನ್ನ ತಂದೆಯ ಹೆಸರಿನಲ್ಲಿತ್ತು. ದಿನಾಂಕ 18.02.2002 ಕ್ಕೆ ನನ್ನ ತಂದೆಯ ಹೆಸರು ಹೆಚ್.ಎಂ.ಕರಿಯಪ್ಪ ಅಲಿಯಾಸ್ ಕರೀಗೌಡ ಎಂದು ತೋರಿಸಲು ಯಾವುದಾದರೂ ದಾಖಲೆ ಇತ್ತು ಎಂದರೆ ರಿಜಿಸ್ಟರ್ ಪತ್ರ ಇತ್ತು. ಸ.ನಂ.2/2 ರ 5 ಗುಂಟೆ, ಸ.ನಂ.3 ರಲ್ಲಿ 16 ಗುಂಟೆ, ಸ.ನಂ.6/1 ರಲ್ಲಿ 12 ಗುಂಟೆ, ಸ.ನಂ. 6/2 ರಲ್ಲಿ 8 ಗುಂಟೆ, ಸ.ನಂ.6/3 ರಲ್ಲಿ 4 ಗುಂಟೆ ಈ ಜಮೀನುಗಳ ಖಾತೆ ಮಾಗಲಿ ಗ್ರಾಮದ ಕರೀಗೌಡ ಬಿನ್ ಮಲ್ಲೇಗೌಡ ಎಂಬುವರ ಹೆಸರಿನಲ್ಲಿತ್ತು ಎಂದರೆ ಅದು ನನ್ನ ತಂದೆಯ ಹೆಸರು. ಕರೀಗೌಡ ಎಂಬ ಹೆಸರಿನ ಮುಂದೆ ಅಲಿಯಾಸ್ ಹೆಚ್.ಎಂ.ಕರೀಯಪ್ಪ ಎಂದು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ಮೇಲ್ಕಂಡ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ತಹಶೀಲ್ದಾರ್ ಮುಂದೆ ಅರ್ಜಿ ಕೊಟ್ಟಿದ್ದೇನೆ ಎಂದರೆ ಸುಳ್ಳು. ಸ.ನಂ.3 ರ ಖಾತೆ ಈಗಲೂ ಸಹ ಕರೀಗೌಡ ಬಿನ್ ಮಲ್ಲೇಗೌಡರವರ ವಾರಸುದಾರರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸುಳ್ಳು. ರಾಜಿ ಅರ್ಜಿಯ ಪ್ರಕಾರ ಸ.ನಂ.35 ರಲ್ಲಿ 28 ಗುಂಟೆಯ ಪೂರ್ವಕ್ಕೆ ಕಟ್ಟೆ , ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ತಾಯಮ್ಮ ಮತ್ತು ಮಲ್ಲೇಗೌಡ, ದಕ್ಷಿಣಕ್ಕೆ ಮಣಿಕಂಠ ಮತ್ತು ಮಹೇಶರವರ ಜಮೀನು ಎಂದು ತೋರಿಸಿದ್ದೇನೆ. ಈ ಚೆಕ್ಕುಬಂಧಿಯೊಳಗಿರುವ ಜಮೀನಿಗೆ ಕ್ರಯ ಪತ್ರದ ಮೂಲಕ ನಮಗೆ ಹಕ್ಕು

ಬಂದಿದೆ. ಆ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ಕ್ರಯ ಪತ್ರ ನೊಂದಣಿಯಾಗಿಲ್ಲ. ವಾದಿ ಅನಕ್ಷರಸ್ಥರಾಗಿರುವುದರಿಂದ ಅವರ ಸಹಿ ಮತ್ತು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ವಾದಿ ಕಾಳಮರಿಗೌಡರಿಗೆ ಯಶೋಧಮ್ಮ ಪತ್ನಿ ಮತ್ತು ಅವರ ಮಕ್ಕಳು ಶಾಂತಾ, ಜ್ಯೋತಿ, ಪುಟ್ಟರಾಜ, ನೇತ್ರ ಮತ್ತು ಸತೀಶ ಎಂದರೆ ಸರಿ. ನಿ.ಪಿ–7 ರಲ್ಲಿ ಕಾಳಮರೀಗೌಡ ಬಿನ್ ಸಣ್ಣೇಗೌಡ ಆಗಿದ್ದು ಇವರಿಗೆ ಮಕ್ಕಳಿಲ್ಲವಾದ್ದರಿಂದ ಸ್ವತಃ ಇವರು ಮತ್ತು ಇವರ ಏಕೈಕ ಪತ್ನಿ ಕಾಳಮ್ಮ ಸ್ವತಃ ಛಾಪಾ ಕಾಗದದ ಮೇಲೆ ಒಪ್ಪಿಗೆ ಪತ್ರ ಬರೆದು ಸ.ನಂ.35 ರಲ್ಲಿ 28 ಗುಂಟೆ, ಸ.ನಂ.39 ರಲ್ಲಿ 1 ಗುಂಟೆ ಖಾತೆಯನ್ನು ಕರೀಗೌಡರ ಏಕೈಕ ಪುತ್ರ ಎಂಬುದಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯದಿಂದ ರಾಜಿ ಡಿಕ್ರಿ ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು. ಚೆಕ್ಕುಬಂಧಿ ಕೊಡದೇ ನ್ಯಾಯಾಲಯದ ಮುಂದೆ ರಾಜಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ಕರೀಗೌಡ ಬಿನ್ ಮಲ್ಲೇಗೌಡ ಹಾಗೂ ದಿನಾಂಕ 18.02.2002 ರ ಒಪ್ಪಿಗೆ ಪತ್ರ ಹೊರತುಪಡಿಸಿ ಹೊನ್ನಾಪುರದ ದಾಖಲೆಗಳಲ್ಲಿ ಹೆಚ್.ಎಂ.ಕರೀಯಪ್ಪ ಬಿನ್ ಮಲ್ಲೇಗೌಡ ಎಂಬ ಹೆಸರಿನಲ್ಲಿ ಖಾತೆ ಇರುತ್ತದೆ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಹೆಚ್.ಎಂ.ಕರಿಯಪ್ಪ ಎಂದು ಇದೆ ಅಲಿಯಾಸ್ ಕರಿಗೌಡ ಎಂದು ಇರುವುದಿಲ್ಲ. ವಾದಿ ಕಾಳಮರೀಗೌಡರಿಗೆ ಮಂಜೂರಾಗಿರುವ 3 ಎಕರೆ 35 ಗುಂಟೆಯಲ್ಲಿ ಹಕ್ಕು ಸ್ವಾಧೀನ ಹೊಂದಿದ್ದಾರೆ ಎಂದರೆ ನಾನು ಸ್ವಾಧೀನ ಇದ್ದೇನೆ. ಆರ್.ಎ ನಂಬರ್ 87/2017 ರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೇನೆ. ದಾವಾ ಆಸ್ತಿಗಳ ಸಂಬಂಧ ವಾದಿ ಮುತ್ತೂರು ವ್ಯವಸಾಯ ಸಹಕಾರ ಸೇವಾ ಸಂಘದಿಂದ ಸಾಲ ಪಡೆದುಕೊಳ್ಳುತ್ತಿದ್ದಾರೆ ಎಂದರೆ ಅವರ ಹೆಸರಿನಲ್ಲಿ ಖಾತೆ ಇರುವುದರಿಂದ ತೆಗೆದುಕೊಳ್ಳುತ್ತಿದ್ದಾರೆ ನಾನೇ ಸ್ವಾಧೀನ ಇದ್ದೇನೆ. ಬೆಳೆ ಸಾಲ

ಕೊಡಬೇಕಾದರೆ ಗ್ರಾಮ ಲೆಕ್ಕಿಗರು ದೃಢೀಕರಣ ಕೊಟ್ಟರೆ ಮಾತ್ರ ಸಾಲ ಕೊಡುತ್ತಾರೆ ಎಂದರೆ ಖಾತೆ ಅವರ ಹೆಸರಿನಲ್ಲಿರುವುದರಿಂದ ಖಾತೆ ಕೊಟ್ಟಿದ್ದಾರೆ. ಅವರಿಗೆ ಸಾಲ ಕೊಡುತ್ತಿದ್ದ ಬಗ್ಗೆ ನಾನು ವ್ಯವಸಾಯ ಸಹಕಾರ ಸೇವಾ ಸಂಘದಲ್ಲಿ ಕೇಳಿಲ್ಲ. ವಾದಿಯ ಹೆಸರಿಗೆ ಖಾತೆಯಾಗಿರುವ ಬಗ್ಗೆ ನಾನು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿ ಹಾಕಿಲ್ಲ ಎಂದರೆ ಸರಿ. ನಿ.ಡಿ–3 ರಲ್ಲಿ ಮಾಗಳಿ ಕರಿಯಪ್ಪ ಎಂದು ಮಾತ್ರ ಇದೆ ಎಂದರೆ ಕರಿಯಪ್ಪ ಎಂದು ಇತ್ತು ಅದರಲ್ಲಿ ಹಾಕಿಲ್ಲ. ಆಸ್ತಿ ಲಪಟಾಯಿಸುವ ಉದ್ದೇಶದಿಂದ ನಿ.ಡಿ–3 ರ ದಾಖಲೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ–4 ರ ಪ್ರಕಾರ ಸುಳ್ಳು ದಾಖಲೆ ನೀಡಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಾಗಳಿ ಗ್ರಾಮದಲ್ಲಿ ಯಾವುದೇ ಆಸ್ತಿಗಳು ಇಲ್ಲದಿದ್ದರೂ ನಾನು ಮಾಗಳಿ ಗ್ರಾಮದ ನಿವಾಸಿ ಎಂದು ಸುಳ್ಳು ದಾಖಲೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ–6 ರಲ್ಲಿ ನನ್ನ ತಂದೆಯ ಹೆಸರು ಹೆಚ್ ಎಂ ಕರಿಯಪ್ಪ ಅಲಿಯಾಸ್ ಕರೀಗೌಡ ಎಂದು ಇಲ್ಲದೇ ಇರಬಹುದು. ನಾನು ಹಾಜರುಪಡಿಸಿರುವ ದಾಖಲೆಯ ಪ್ರಕಾರ ಸ.ನಂ.35 ಮತ್ತು 39 ರಲ್ಲಿ ಸರ್ಕಾರಿ ಬೀಳು ಎಂದು ಇದೆ ಆದರೆ ನನ್ನ ಸ್ವಾಧೀನದಲ್ಲಿದೆ. ವಾದಿಯು ಸೇರಿದಂತೆ ಸರ್ಕಾರ ಎಲ್ಲರಿಗೆ ಮಂಜೂರು ಮಾಡಿದೆ ಎಂದರೆ ಸರಿಯಲ್ಲ. ಸುಳ್ಳು ಡಿಕ್ರಿ ಪಡೆದುಕೊಂಡಿರುವುದರಿಂದ ಅದು ವಾದಿಯನ್ನು ಬಾಧ್ಯಗೊಳಿಸುವುದಿಲ್ಲ ಎಂದರೆ ಸರಿಯಲ್ಲ. ವಾದಿ ಕಾಳಮರೀಗೌಡರ ವಿರುದ್ಧ ಕಿರಿಯ ಶ್ರೇಣಿಯ ನ್ಯಾಯಾಲಯಲ್ಲಿ ಅಸಲು ದಾವಾ ನಂಬರ್ 399/2017 ರಲ್ಲಿ ದಾವೆ ಹೂಡಿದ್ದೆ ಎಂದರೆ ಸರಿ. ಆ ಕೇಸಿನಲ್ಲಿ ನಾನು ವಿನಾಕಾರಣ ತೊಂದರೆ ಕೊಟ್ಟಿರುವುದಾಗಿ 3000 ರೂ ದಂಡ ವಿಧಿಸಿ ದಾವೆ ವಜಾ ಆಗಿದೆ ಎಂದರೆ ಸುಳ್ಳು. ಆ ಜಾಗದಲ್ಲಿ ವಾದಿ ಮತ್ತು ಅವರ ಮಗಳು ಮನೆ ಕಟ್ಟುತ್ತಿದ್ದಾಗ ಆ ಜಾಗ ನನಗೆ ಸೇರಬೇಕೆಂದು ಪಂಚಾಯಿತಿಯವರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಆ ಜಾಗ

ಎಂದರೆ ಸ.ನಂ.2/2. ಅದನ್ನು ಮಾರಾಟ ಮಾಡಿದ್ದೇನೆ. ಸ.ನಂ.2/2 ರಲ್ಲಿ ಬ್ಯಾರನ್ ಮನೆ, ವಾಸದ ಮನೆ, ದನದ ಕೊಟ್ಟಿಗೆ ಮನೆ ಇದೆ ಎಂದರೆ ಸರಿ ಅದನ್ನು ನಮ್ಮ ತಂದೆ ಕಟ್ಟಿದ್ದಾರೆ. ಅದೆಲ್ಲವನ್ನೂ ಸೇರಿ ಮಾರಾಟ ಮಾಡಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**